> ನಂಗ್ ಕನಸಲೀ ದಿನವೂ ಇವ್ರು ಬಂದು, ‘ಬಿಡ್ಸಕ್ಕಂಡ್ ಬಂದ್ಯಾ ವೈದೇಹಿ?’ ಅಂತಾ ಕೇಳೂದದೆ ಮಾರಾಯ. ಎಲ್ಲೋ ಅವರಾತ್ಮಕ್ಕೆ ಮನಃಶಾಂತಿಯಿಲ್ದೇ ಅಲೀತಿದ್ಯೋ ಯೆಂತೋ?’ ಸಮಜಾಯಿಸುತ್ತಾ ವೈದೇಹಿ ಹೇಳಿದಾಗ, ಶ್ರೀಪಾದನಿಗೆ ಆ ರಗಳೆಯಲ್ಲೂ ತನ್ನನ್ನು ಬಂಧಿಸಲು ಅಮ್ಮ ಹುಡುಕುತ್ತಿರುವ ಭಾವನಾತ್ಮಕ ಎಳೆ ಕಂಡು ಒಂದು ಕ್ಷಣ ತಮಾಷೆಯೆನ್ನಿಸಿತು.

ಮೊಮ್ಮಗಳನ್ನು ಆಡಿಸಿ ಕೊಟ್ಟಿದ್ದಾಳೆ. ಸದ್ಯಕ್ಕೆ ಬಂದು ನಿಂತಿರುವ ಬದುಕಿನ ಘಟ್ಟದ ಬಗ್ಗೆ ಬಾಲ್ಯದ ಮುಜುಗರವೆಲ್ಲಾ ಕಳೆದು ತುಂಬಾ ಅಲ್ಲದಿದ್ದರೂ ಸಣ್ಣ ಹೆಮ್ಮೆಯೊಂದು ತಲೆಯೊಳಗೆ ಸುಳಿದಾಡುತ್ತಿರುವಾಗ...

ಈಗ ನೋಡಿದರೆ?...

‘ನಿನ್ನ ಮದ್ವೆ ಹೊತ್ಗೇ ಅವ್ರನ್ನಾ ಕೇಳಿ ಯೆಲ್ಲಾ ಬಿಡ್ಸಿಕ್ಕಂಡ್ ತಂದ್ ಬಿಡ್ಬೋದಾಕಿತ್ತು ಮಾರಾಯ. ಪದ್ದಕ್ಕಯ್ಯರೂ ಸರಿಯಿದ್ರೂ. ಯೆಂತಕ್ಕೋ ನೋಡ್, ಆಗ ಗಂಟ್ಲು ಒತ್ತಿ ಬಂತು. ನಮ್ದೂ ಅಂತಾಗಿದ್ದನ್ನಾ ಕೇಳೂಕೂ ಯೆಂತಾಂತ ಗೊತ್ತಿಲ್ಲ ಅಪ್ಪೀ, ಒನ್ ನಮೂನಿ ಹಿಂಜರ್ಕೆ. ಇದ್ದೊಂದ್ ಸಂಬಂಧವೂ ಈ ನೆಪದಲ್ಲಿ ಕಡ್ಕಂಡ್ರೇಂತಾ ಜೀವಾ ಪುಕುಪುಕೂ ಅಂತಿತ್ತು. ನೀ ಬ್ಯಾರೆ ಬೆಂಗ್ಳೂರ್ ಪೇಟೆ ಸೇರ್ಕಂಡೆ. ಯಾನ್ನೋರ್ ಕಟ್ಕಂಡೆ. ನಾನೊಬ್ಬೇ ಇಲ್ಲಿ ಬದ್ಕುಬೇಕಿತ್ತಲ್ಲನಾ?...’

ಈ ಮಾತಿನ ಹಿಂದ್ಯಾವ ಗಹನವಾದ ಅರ್ಥವಿದೆಯೆನ್ನುವುದು ಶ್ರೀಪಾದನಿಗೆಂದೂ ತಿಳಿಯುತ್ತಿರಲಿಲ್ಲ. ಆದರೆ, ‘ನೀ ಹುಟ್ಟೀದ್ ಮೇಲೇ ಹಿಂಗೆಲ್ಲಾ ಆತು ಕಂಡ್ಯಾ?’ ಬಾಲ್ಯದಲ್ಲಿ ಪ್ರತಿ ಮಾತಿನ ನಂತರವೂ ಮುಕ್ತಾಯವೆಂಬಂತೆ ವೈದೇಹಿ ಹೇಳುತ್ತಿದ್ದ ಮಾತಿನಂತೆಯೇ ಇವೂ ಕೇಳಿಸಿ, ಶ್ರೀಪಾದನಿಗೆ ಹೊಟ್ಟೆಯೊಳಗೆ ಯಾರೋ ಕೈ ಹಾಕಿ ಅರೆಚಿದಂತಾಗಿ ಕರ್ಕರೆಯನ್ನುಂಟು ಮಾಡುತ್ತಿತ್ತು.

ಎಷ್ಟು ಬಾರಿ ಅವನೂ, ಸುಮತಿ ಕರೆದರೂ ವೈದೇಹಿ ಬೆಂಗಳೂರಿಗೆ ಬಂದು ನೆಲೆಸಲು ಒಪ್ಪಿರಲಿಲ್ಲವೆನ್ನುವುದು ಅವನನ್ನು ಯಾವಾಗಲೂ ಹಿಂಡುತ್ತಿದ್ದ ವಿಷಯ. ಶಾಲೆಯಿಂದ ನಿವೃತ್ತಿ ಪಡೆದ ನಂತರವೂ ಅಪ್ಪಯ್ಯ ಕಟ್ಟಿಸಿದ ಮನೆಯೆಂದು ಇಲ್ಲೇ ಉಳಿದಿದ್ದಳು. ದೊಡ್ಡಪ್ಪಯ್ಯನ ಮನೆಯವರು ಅಮ್ಮನನ್ನು ನೋಡಲು ಬರುತ್ತಿದ್ದದ್ದಾಗಲೀ, ಅಮ್ಮ ಅವರ ಮನೆಗೆ ಹೋಗುತ್ತಿದ್ದದ್ದಾಗಲೀ ಅಷ್ಟರಲ್ಲಿತ್ತಾದರೂ ಅವಳು ಊರಿಗೆ ಅಂಟಿಕೊಂಡಿದ್ದಳು.

‘ಚೈತ್ರನಾ ಮದ್ವೆಗಾದ್ರೂ ಮನೆತನದ್ದಂತಾ ಒಂಚೂರು ನಗ, ದಾಗಿನ ಹಾಕ್ಕಣಾಂತ. ಈ ಹೆಳೆನಾದ್ರೂ ಇಟ್ಕಂಡ್ ನಾಳಿಗೆ ಹೋಗಣ. ನಾನೂ ಬತ್ತೀನಿ. ಇಂತಾ ಭಾರಿ ಮನೆತನದ ಸೊಸೆಯಾಗಿ ಯೆಂತಾ ಚೆನ್ನನೂ ನಾ ಕಾಣಲ್ಲ, ಸುಮತಿ ಕಾಣಲ್ಲ. ಇನ್ ಎಷ್ಟು ದಿನಾ ಇತ್ತೀನಾ? ಚೈತ್ರಗಾದ್ರೂ ಈ ಮನಿಗೆ ಒಪ್ಪೋಂಗೆ ಮದ್ವೆ ಮಾಡಾಣ. ನೀ ಯೆಂತಾ ಹೇಳ್ತಿ ಅಪ್ಪೀ?’

ಹೇಳುವುದೇನು? ಅಮೆರಿಕಾದ ಕನಸು ಕಾಣುತ್ತಿರುವ ಚೈತ್ರಾ ಈ ಚಿನ್ನಕ್ಕಾಗಿ ಖಂಡಿತಾ ಆಸೆ ಪಡುವುದಿಲ್ಲವೆಂದು ಗೊತ್ತು. ಚೈತ್ರಾ ತನ್ನೊಡನೆ ಎಂಜಿನಿಯರ್ ಮಾಡುತ್ತಿರೋ ಹುಡುಗನೊಬ್ಬನನ್ನು ಪ್ರೀತಿಸುತ್ತಿರುವ ವಿಷಯ ಹೇಳಿದ್ದೇ ತಪ್ಪಾಯಿತೇ? ಈ ಸಲ ಯಾಕೋ ಅಮ್ಮ